‘ಹಲೋ...’ ಅತ್ತಲಿಂದ ಅಮ್ಮನ ಧ್ವನಿ.

‘ಅಮ್ಮಾ, ನಾನು...’ ಕೊಂಚ ಅಸಹನೆಯಿಂದಲೇ ಹೇಳಿದ.

‘ಓ ಮಾಣಿ... ಆರಾಮನ?... ಅಮ್ಮನ ಧ್ವನಿಯಲ್ಲಿ ಒಮ್ಮಲೆ ಉತ್ಸಾಹ ಕಾಣಿಸಿಕೊಂಡಿತು. ‘ಸಂಜೆ ಆ ಹುಡುಗಿ ಕರುಣಾಳ ಭೇಟಿ ಮಾಡ್ಲಿಕ್ಕೆ ತಯಾರಿ ಮಾಡ್ಕೊಂಡಿದಿಯಾ ಅಲ್ವೇನೋ?... ಐದೂವರೆ ಅಂದ್ರೆ ಐದೂವರೆಗೆ ಅವಳು ಹೇಳಿದ ಜಾಗದಲ್ಲಿ ಇದ್ದುಬಿಡು. ತಡ ಮಾಡ್ಕೊಳ್ಳೂದು ಬ್ಯಾಡ. ಆಮೇಲೆ ಅದೇ ಪರಾಮಶಿ ಆದ್ರೆ ಕಷ್ಟ... ಸರೀ ಮಾತಾಡು...’ ಅಮ್ಮನ ಕಾಳಜಿಯ ಧ್ವನಿ ಕೇಳಿ ಸದಾ ಒಮ್ಮೆಲೇ ಸ್ಫೋಟಗೊಂಡ.

‘ಇಲ್ಲಾ, ಆಗೂದಿಲ್ಲಾ...’ ಗಟ್ಟಿಯಾಗಿ ಹೇಳಿ ಎರಡು ಸಲ ಉಸಿರು ತೆಗೆದುಕೊಂಡು ಸಂಭಾಳಿಸಿಕೊಂಡ. ‘ಎಂಥದಕ್ಕೆ ಈ ಎಲ್ಲಾ ನಾಟಕ? ನಾ ಹೆಂಗಿದೆನೋ ಹಂಗೇ ಇರ್ಲಿಕ್ಕೆ ಬಿಡಿ... ಯಾಕೆ ಜೀವ ತಿಂತೀರಿ?’ ಅಂತೇನೋ ದೈನ್ಯವಾಗಿ ಹೇಳ ಹೊರಟವನನ್ನು ‘ಮತ್ತೆ ಶುರು ಮಾಡಿದ್ಯಾ?’ ಎಂಬ ಅಮ್ಮನ ಧ್ವನಿ ತಡೆದಿತ್ತು. ಮತ್ತೆ ಮಾತಿಗೆ ತೊಡಗಿದಾಗ ಅಮ್ಮನ ಧ್ವನಿಯಲ್ಲಿ ಕೊಂಚ ಅಳುಬುರುಕುತವೂ ಸೇರಿಕೊಂಡಿತ್ತು. ‘ಯಾರಿಗೂ ಅರ್ಥ ಮಾಡಿಸ್ಲಿಕ್ಕೆ ಆಗೂದಿಲ್ಲ ನನ್ನತ್ರ. ಇತ್ಲಾಗೆ ನಿನ್ನಪ್ಪ ನೋಡಿದ್ರೆ ಕೌರವನ ವೇಷ ಹಾಕ್ದವ್ರಂಗೆ ದಿಮಿದಿಮಿ ಕುಣಿತಾರೆ. ಅತ್ಲಾಗೆ ನಿಂದಂತೂ ಎಂತಾ ವಿಶ್ವರೂಪ ಅಂತಾನೇ ಗೊತ್ತಾಗೂದಿಲ್ಲಾ... ಎಲ್ಲರಿಗೂ ಬೈಲಿಕ್ಕೆ ಮಾತ್ರ ನಾನೊಬ್ಬಳೇ ಸಿಗೂದು. ನಾ ಎಲ್ಲಾದ್ರೂ ಓಡಿಹೋಗ್ತೇನೆ ಮನೆ ಬಿಟ್ಟು. ನಿಮ ನಿಮಗೆ ಯಾವ್ದು ಸರಿ ಕಾಣ್ತದೋ ಅದ್ನ ಮಾಡ್ಕೊಳ್ಳಿ... ನೀ ಏನು ಹೇಳೂದಿದ್ರೂ ಅಪ್ಪನತ್ರ ಡೈರೆಕ್ಟು ಮಾತಾಡು. ನನ್ನತ್ರ ಹೇಳೂದು ಬ್ಯಾಡ...’

ಸದಾ ಕರೆ ಕತ್ತರಿಸಿ ತುಟಿ ಕಚ್ಚಿದ. ಕೈ ಸಣ್ಣಗೆ ಕಂಪಿಸುತ್ತಿತ್ತು. ‘ಅಪ್ಪನ ಹತ್ರೂ ಹೇಳೇ ಬಿಡ್ವಾ...’ ಅನಿಸಿದರೂ ಮತ್ತೆ ಫೋನ್ ಮಾಡಲು ಧೈರ್ಯ ಸಾಲಲಿಲ್ಲ. ಮೊನ್ನೆ ಅಪ್ಪನೇ ಫೋನ್ ಮಾಡಿ ವಿಷಯ ತಿಳಿಸಿದಾಗಲಿಂದಲೂ ಹೀಗೆಯೇ ಒದ್ದಾಡುತ್ತಿದ್ದ. ತಡೆದುಕೊಳ್ಳಲಾಗದೆ ಮನೆಗೆ ಫೋನ್ ಮಾಡುವುದು, ಫೋನ್ ರಿಸೀವ್ ಮಾಡುವ ಅಮ್ಮನ ಬಳಿ ಜಗಳವಾಡುವುದು, ಅಪ್ಪನ ಬಳಿ ಮಾತನಾಡಲು ಧೈರ್ಯ ಸಾಲದೇ ಸುಮ್ಮನಾಗುವುದು. ಇದು ಎಷ್ಟನೆಯ ಸಲವೋ...

ಇನ್ನೇನು ಕಣ್ಣಿನಲ್ಲಿ ನೀರು ಬಂದುಬಿಡ್ತದೆ ಎಂದು ತಿಳಿದಿದ್ದೇ ಅಚ್ಯುತನೇನಾದರೂ ನೋಡಿದರೆ ದೊಡ್ಡ ಸೀನೇ ಕ್ರಿಯೇಟ್ ಮಾಡಿಬಿಡುತ್ತಾನೆಂದು ಪಟಪಟ ರೂಮಿಂದ ಹೊರಬಿದ್ದು ಟೆರೇಸು ಹತ್ತಿ ಸಿಗರೇಟು ಹಚ್ಚಿದ. ತುಂಬಿ ನಿಂತಿದ್ದ ಕಣ್ಣುಗಳನ್ನು ಬಿಳಿ ಬನಿಯನ್ನಿನ ಹೆಗಲಿನಲ್ಲಿ ಒರೆಸಿಕೊಂಡು ಟೆರೇಸು ಕಟ್ಟೆ ಹಿಡಿದು ಕೆಳಗೆ ನೋಡತೊಡಗಿದ.

ಕೆಳಗೆ ಸೊಪ್ಪು ಮಾರುವವ ವಿಚಿತ್ರವಾಗಿ ಕೂಗುತ್ತಾ ಸೈಕಲ್ ತಳ್ಳಿಕೊಂಡು ಹೋಗುತ್ತಿದ್ದ. ರಸ್ತೆ ಮೇಲಿನ ವಿದ್ಯುತ್ ತಂತಿಗಳು, ಬಿಲ್ಡಿಂಗಿನಿಂದ ಬಿಲ್ಡಿಂಗಿಗೆ ಜೋತು ಬಿದ್ದಿದ್ದ ಕೇಬಲ್ ತಂತಿಗಳ ಬಲೆಯಲ್ಲಿ ಮೆಲ್ಲ ತೆವಳುತ್ತಿರುವ ಜೇಡನಂತೆ ಅವನು ಕಾಣುತ್ತಿದ್ದ. ಆ ಚಿತ್ರವನ್ನೇ ನೋಡುತ್ತ ನಿಂತಿದ್ದ ಸದಾನಿಗೆ ತನ್ನ ಕಾಲೇಜು ದಿನಗಳು, ಬೆಂಗಳೂರಿಗೆ ಬಂದ ಆರಂಭದ ದಿನಗಳೆಲ್ಲ ಒಮ್ಮೊಮ್ಮೆಲೆ ನೆನಪಾದವು. ಸ್ವಾತಿ ಮತ್ತು ಶ್ರಾವಂತಿಯರ ಮುಖಗಳೂ, ಅವರ ಮಾತುಗಳೂ ನೆನಪಾದದವು. ವಿಪಿನ್ ನೆನಪಾದ. ಶ್ರಾವಂತಿಯ ಮೊಬೈಲ್ ನಂಬರಿನ ಕೊನೆಯ ಮೂರು ಸಂಖ್ಯೆಗಳು ನೆನಪಾಗುತ್ತವೆಯೇ ಎಂದು ನೆನಪಿಸಿಕೊಳ್ಳಲು ಯತ್ನಿಸಿದ. 9483265... ಉಳಿದವು ಎಷ್ಟು ಪ್ರಯತ್ನಿಸಿದರೂ ನೆನಪಾಗಲಿಲ್ಲ.

ಸ್ವಾತಿಯ ಮುಖವನ್ನು ಮನಸ್ಸಿಗೆ ತಂದುಕೊಂಡ. ಅವಳು ಪರಿಚಯವಾಗಿದ್ದು,